# <u>ಕರ್ನಾಟಕ ವಿಧಾನ ಪರಿಷತ್ತು</u>

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 02 |
| 2. | ಮಾನ್ಯ ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ<br>(ಪದವೀಧರರ ಕ್ಷೇತ್ರ) |
| 3. | ಉತ್ತರಿಸಬೇಕಾದ ದಿನಾಂಕ | : | 13.02.2024. |
| 4. | ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು. |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ 'ಎಳನೀರು' ಮಾರಾಟಕ್ಕೆ ಮೀಸಲಿಟ್ಟ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಎಲ್ಲೆಲ್ಲಿವೆ; (ಸಂಪೂರ್ಣ ವಿವರ ನೀಡುವುದು)</td><td>ಅಧಿಸೂಚಿತ 93 ಕೃಷಿ ಉತ್ಪನ್ನಗಳಲ್ಲಿ ಎಳನೀರು ಒಳಗೊಂಡಿದೆ. ರಾಜ್ಯದಲ್ಲಿ 'ಎಳನೀರು' ಮಾರಾಟಕ್ಕೆ ಪಾಂಡವಪುರ, ಮಳವಳ್ಳಿ, ಮಂಡ್ಯ, ಮದ್ದೂರು, ಕೆ.ಆರ್.ಪೇಟೆ, ಕಡೂರು, ಅರಸೀಕೆರೆ, ಹೊಳೆನರಸೀಪುರ, ಚನ್ನರಾಯಪಟ್ಟಣ, ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಮೀಸಲಿಟ್ಟಿದ್ದು, ಎಳನೀರು ವಹಿವಾಟು ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತದೆ.</td></tr>
<tr><td>ಆ)</td><td>ಕಳೆದ 05 ವರ್ಷಗಳಲ್ಲಿ ಮಂಡ್ಯ ಜಿಲ್ಲೆ ಮದ್ದೂರು ಪಟ್ಟಣದ ಎ.ಪಿ.ಎಂ.ಸಿ. ಎಳನೀರು ಮಾರುಕಟ್ಟೆಯಲ್ಲಿ ಆಗಿರುವ ವಹಿವಾಟಿನ ಮೊತ್ತ ಎಷ್ಟು ಬಂದಂತಹ ಲಾಭದ ಪ್ರಮಾಣ ಎಷ್ಟು; (ವರ್ಷವಾರು ಸಂಪೂರ್ಣ ವಿವರ ನೀಡುವುದು)</td><td>ಕಳೆದ 05 ವರ್ಷಗಳಲ್ಲಿ ಮಂಡ್ಯ ಜಿಲ್ಲೆ ಮದ್ದೂರು ಪಟ್ಟಣದ ಎ.ಪಿ.ಎಂ.ಸಿ. ಎಳನೀರು ಮಾರುಕಟ್ಟೆಯಲ್ಲಿ ಆಗಿರುವ ವಹಿವಾಟಿನ ಮೊತ್ತ ಈ ಬಾಬ್ತಿನಡಿಯಲ್ಲಿ ಬಂದಿರುವ ಆದಾಯ ವಿವರ ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ವಹಿವಾಟಿನ ಮೌಲ್ಯ</th><th>ಆದಾಯ</th></tr>
<tr><td>2018-19</td><td>1683522200</td><td>2,73,91,501</td></tr>
<tr><td>2019-20</td><td>1845306466</td><td>2,89,63,287</td></tr>
<tr><td>2020-21</td><td>1868945341</td><td>1,40,98,242</td></tr>
<tr><td>2021-22</td><td>1820743200</td><td>1,27,54,279</td></tr>
<tr><td>2022-23</td><td>1764790833</td><td>1,19,23,797</td></tr>
</table></td></tr>
<tr><td>ಇ)</td><td>ಮದ್ದೂರು ಪಟ್ಟಣದ ಎ.ಪಿ.ಎಂ.ಸಿ. ಎಳನೀರು ಮಾರುಕಟ್ಟೆ ಆವರಣ ದಲ್ಲಿ ಮೂಲ ಸೌಲಭ್ಯಗಳಿಲ್ಲದೆ ಗ್ರಾಹಕರು ವರ್ತಕರು ರೈತರು ವ್ಯಾಪಾರಸ್ಥರಿಗೆ ತೀವ್ರ ತೊಂದರೆ ಯಾಗಿರುವುದು ಹಾಗೂ ಮಾರುಕಟ್ಟೆ ಅನೈರ್ಮಲ್ಯ ದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="2">ಆಡಳಿತ ಕಛೇರಿ, ಅಂಗಡಿ ಮಳಿಗೆಗಳು, ಗೋದಾಮು, ಶ್ರಮಿಕ ಭವನ, ಅಂಗಡಿ-ವ-ಗೋದಾಮು, ರೈತ ಭವನ, ಕ್ಯಾಂಟೀನ್ ಕಟ್ಟಡ, ಕುಡಿಯುವ ನೀರಿನ ಘಟಕ, ಆಂತರಿಕ ರಸ್ತೆ, ಬೀದಿ ದೀಪ, ವೇಬ್ರಿಡ್ಜ್, ಮುಚ್ಚು ಹರಾಜುಕಟ್ಟೆಗಳು ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಿದ್ದು, ನೈರ್ಮಲ್ಯ ವ್ಯವಸ್ಥೆ ಕಾಪಾಡಲು ಮದ್ದೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕ್ರಮ ವಹಿಸಿದೆ.<br><br>ಶ್ರಮಿಕ ಭವನ, ರೈತರ ವಿಶ್ರಾಂತಿ ಕೊಠಡಿ ಮತ್ತು ಗೋದಾಮುಗಳು ಸುಸ್ಥಿತಿಯಲ್ಲಿರುತ್ತವೆ.</td></tr>
<tr><td>ಈ)</td><td>ಬಂದಿದ್ದಲ್ಲಿ; ಎಳನೀರು ಮಾರುಕಟ್ಟೆ ಆವರಣದಲ್ಲಿ ಮೂಲಸೌಲಭ್ಯಗಳನ್ನು ಕಲ್ಪಿಸಲು ಹಾಗೂ ಶಿಥಿಲಗೊಂಡಿರುವ ಶ್ರಮಿಕ ಭವನ, ರೈತರ ವಿಶ್ರಾಂತಿ ಕೊಠಡಿ ಗೋದಾಮುಗಳ ದುರಸ್ಥಿ/ ಆಧುನೀ ಕರಣಕ್ಕೆ ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)</td></tr>
</table>

| | | |
|---|---|---|
| ಉ) | ಕಳೆದ 05 ವರ್ಷಗಳಲ್ಲಿ ಮಾರುಕಟ್ಟೆ ಆವರಣದಲ್ಲಿ ಶುಚಿತ್ವ ಕಾಯ್ದುಕೊಳ್ಳಲು ಹಾಗೂ ಮೂಲಸೌಲಭ್ಯಗಳನ್ನು ಕಲ್ಪಿಸಲು ಮಾಡಿರುವ ವೆಚ್ಚ ಎಷ್ಟು? (ವರ್ಷವಾರು ಸಂಪೂರ್ಣ ವಿವರ ನೀಡುವುದು) | ಮದ್ದೂರು ಪಟ್ಟಣದ ಎ.ಪಿ.ಎಂ.ಸಿ. ಮಾರುಕಟ್ಟೆ ಆವರಣದಲ್ಲಿ ಕಳೆದ 05 ವರ್ಷಗಲ್ಲಿ ಸ್ವಚ್ಛತೆಗೆ ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಮಾಡಿರುವ ವೆಚ್ಚದ ವಿವರ ಕೆಳಗಿನಂತ್ತಿದೆ. |

| ವರ್ಷ | ಸ್ವಚ್ಛತೆಗೆ ಮಾಡಿರುವ ವೆಚ್ಚ (ರೂ.ಗಳಲ್ಲಿ | ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಮಾಡಿರು ವೆಚ್ಚ (ರೂ.ಗಳಲ್ಲಿ) |
|---|---|---|
| 2018-19 | 14,76,838 | 2,45,02,720 |
| 2019-20 | 11,96,063 | 3,91,48,310 |
| 2020-21 | 14,79,030 | - |
| 2021-22 | 15,19,328 | 66,39,797 |
| 2022-23 | 17,78,533 | 8,09,438 |

**ಸಂಖ್ಯೆ: ಸಿಒ 45 ಎಂಆರ್‌ಇ 2024**

**(ಶಿವಾನಂದ ಎಸ್. ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು.